ಮಾತಾಡಿಬಿಟ್ರಿ. ಹೀಗೆ ಮಾತಾಡಿದ್ರೆ ಅವನ ಮೇಲೆ ಏನು ಪರಿಣಾಮವಾದೀತು ಎಂದೂ ಸಹ ಯೋಚಿಸಲಿಲ್ಲ ನೀವು.'

'ಏನೂ ಪರಿಣಾಮ ಆಗಲ್ಲ. ನನಗೆ ಗೊತ್ತು.'

'ಅವನ ಮನಸ್ಸು ಕಹಿ ಆಗೋದಿಲ್ಲವೇ? ಮುಂದೆ ನಮ್ಮನ್ನು ನೋಡಿಕೊಳ್ಳಬೇಕಾದವನು ಅವನು.'

'ಏನು ನೋಡ್ತಾನೋ ಏನೋ– ಅವನು ಅಲ್ಲಿ, ನಾವು ಇಲ್ಲಿ.'

'ಕೈಲಾಗದ ಕಾಲಕ್ಕೆ ಅವನೇ ತಾನೇ ನಮಗೆ ಆಧಾರ?'

ಹೆಂಡತಿಯ ಮಾತಿಗೆ ದೇಸಾಯರು ವಿಸ್ಮಯದಿಂದ ಕಣ್ಣರಳಿಸಿದರು. ಅಲ್ಲ, ಗಂಡನಿಗಿಂತ ಮಗನೇ ಹೆಚ್ಚಾದನೇ ಇವಳಿಗೆ! ಮಗ ಮದುವೆಯಾದ ಕೂಡಲೇ ಇವಳಲ್ಲಿ ಎಷ್ಟು ಬೇಗ ಬದಲಾವಣೆ! ಅವರು ಸುಮ್ಮಗಿರಲಾರದೆ ಹೆಂಡತಿಯನ್ನು ಕೆಣಕಿದರು 'ಅಂತೂ ನೀನು ಮಗನೊಂದಿಗೆ ಇರೋಳು ಅನ್ನು...'

'ನಾನೊಬ್ಬಳೇ ಏಕೆ... ನೀವೂ ಬನ್ನಿ'

'ಅದಕ್ಕಿನ್ನೂ ಸಮಯವಿದೆ...' ದೇಸಾಯರು ಹೆಂಡತಿಯ ಮುಂದೆ ತಮ್ಮ ಮನದಾಳದ ಮಾತುಗಳನ್ನು ಹೇಳತೊಡಗಿದರು. 'ಮೊದಲು ಅವನು ಹೆಂಡತಿಯನ್ನು ಕರೆದುಕೊಂಡು ಊರಿಗೆ ಬರಲಿ. ಈಗ ಊರಿಗೆ ಹೋದ ಕೂಡಲೇ ಸುಬ್ಬಣ್ಣನಂಥ ಸಾವಿರ ಜನ ನನ್ನ ಪ್ರಶ್ನೆ ಕೇಳ್ತಾರೆ. ಆಗ ಏನು ಉತ್ತರ ಕೊಡೋದೋ ಈಗಲೂ ಹೊಳೀತಿಲ್ಲ. ಆದ್ದರಿಂದ ನಾನು ಹೇಳೋದು ಕೇಳು. ಇನ್ನೂ ನಾವು ಮಗನ ಹತ್ರ, ಮಗ ಸೊಸೆ ಇಲ್ಲಿಗೆ, ಹೋಗಿ ಬಂದು ಬಳಕೆ ಆಗಬೇಕಾಗಿದೆ. ಸೊಸೆಯ ಸ್ವಭಾವ ಹೇಗಿದೆಯೋ ನಮಗಿನ್ನೂ ಗೊತ್ತಾಗಿಲ್ಲ. ಒಂದು ವೇಳೆ ಮಗನೇ ಬದಲಾಗಿ ಬಿಟ್ರೆ ಏನು ಮಾಡ್ತಿ?' ಉತ್ತರ ಬಾರದುದರಿಂದ ಅವರು ಹೆಂಡತಿಯ ಕಡೆ ನೋಡಿದರೆ ಅವಳು ಆಕಳಿಸಿ 'ನನಗೆ ನಿದ್ರೆ ಬರ್ತಾ ಇದೆ' ಎಂದು ಮುಖತಿರುಗಿಸಿಕೊಂಡಾಗ ಅಪ್ರತಿಭರಾಗುವುದಷ್ಟೇ ದೇಸಾಯರಿಗೆ ಉಳಿದ ಮಾರ್ಗ.

> **'ಅಲ್ಲಿ ವಿನತಾಗೆ ಹುಷಾರಿಲ್ಲ ಅಂತ ಅವನು ಕರೆಯಲು ಬಂದಿದಾನೆ... ಈಗಲೂ ನೀವು ಮೊಂಡಾಟ ಮಾಡಿದರೆ ಹೇಗೆ? ಇಲ್ಲಿ ನೋಡಿ ಅವಳು ಯಾವ ಜಾತಿಯವಳೇ ಆಗಿರಲಿ, ಅವಳೀಗ ನಮ್ಮ ಸೊಸೆ. ಅವಳು ನಮ್ಮವಳು ಅಂತ ಅಂದುಕೊಂಡ್ರೆ, ಸಾಕು. ಆಗ ಜಾತಿ, ಅಂತಸ್ತು, ಪ್ರತಿಷ್ಠೆ ಎಲ್ಲ ಗೌಣವಾಗಿ ಬಿಡುತ್ತೆ ಮತ್ತೆ ಗಿರಿ ಹೇಳೋದು ಕೇಳಿದ್ರೆ, ವಿನತಾ ಚೆನ್ನಾಗೇ ಇದಾಳೆ ಅನಿಸುತ್ತೆ.'**

ಅಂದು ಕೊಂಡ ಹಾಗೆ ಗಿರೀನೂ ಬರಲಿಲ್ಲ. ಕೆಲವು ದಿನ ಸುದ್ದಿಯೂ ಇಲ್ಲ. ಆಮೇಲೆ ಬಂದದ್ದು ಐದಾರು ಸಲ ಫೋನಿನ ಕರೆ ಮಾತ್ರ. ಟೂರಿಗೆ ಹೋಗಿದ್ದನಂತೆ! ವಿನತಾ ಮಾತ್ರ ಅಮ್ಮಾ, ಇಲ್ಲಿಗೇ ಬಂದ ಬಿಡಿ' ಎಂದು ಬೇಡಿಕೊಂಡಾಗ ಹೆಂಡತಿ ಪುಳಕಿತಳಾದ ಪರಿಯನ್ನು ಕಂಡೇ ದೇಸಾಯರು ಬೆದರಿದರು. 'ಬರ್‍ತೀವಮ್ಮ. ನೀವಿಬ್ರೂ ಒಂದು ಸಲ ಇಲ್ಲಿಗೆ ಬಂದು ಹೋಗಿ. ಇವರಿಗೆ ಸಂತೋಷವಾಗುತ್ತೆ' ಎಂಬ ಇವಳ ಮಾತಿಗೆ ಉತ್ತರಿಸಿದವನು ಗಿರಿ. 'ಬರ್‍ತೀವಿ ಈಗ ಕೆಲಸದ ಒತ್ತಡ ಇದೆ. ನಾಕಾರು ತಿಂಗಳಲ್ಲಿ ಖಂಡಿತ.' ಕೇಳಿ ಅಸಂತುಷ್ಟರಾಗಲು ದೇಸಾಯಿಯರಿಗೆ ಬಹಳ ವೇಳೆ